# ಗಾಂಧೀಜಿಯ ಸರಳ ಓದು

ಗಾಂಧೀಜಿ ಅವರ ಕಥನ ಒಂದು ರೀತಿ ರಾಮಾಯಣದಂತೆ! ದೇಶದ ಯಾವ ಮೂಲೆಗೆ ಹೋದರೂ ಗಾಂಧಿ ಹೆಸರು, ಪ್ರಭಾವ ಹರಡಿಕೊಂಡಿದೆ. ಪ್ರತಿಯೊಬ್ಬರೂ ತಮ್ಮದೇ ಆದ ಗಾಂಧಿಯನ್ನು ಕಟ್ಟಿಕೊಳ್ಳುತ್ತಾ ಬಂದಿದ್ದಾರೆ. ವಿಮರ್ಶಕ ಡಿ.ಎಸ್. ನಾಗಭೂಷಣ ಅವರು ತಮ್ಮ ಕಾಲದಲ್ಲಿ ಮತ್ತೊಮ್ಮೆ ಗಾಂಧಿಯನ್ನು ಓದಬೇಕಾದ ಅಗತ್ಯವನ್ನು ಮುಂದಿಟ್ಟುಕೊಂಡು ಕನ್ನಡದಲ್ಲಿ ಗಾಂಧಿ ಕಥನವನ್ನು ಕಟ್ಟಿದ್ದಾರೆ. ಈವರೆಗೆ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗಾಂಧಿ ಕಥನಗಳು ಬಂದಿವೆ.

ಇಷ್ಟಾದರೂ ಗಾಂಧಿ ಇಂದಿಗೆ ಪ್ರಸ್ತುತವೇ? ಎನ್ನುವ ಪ್ರಶ್ನೆಯನ್ನಿಟ್ಟುಕೊಂಡೇ ನಾವಿಂದು ಗಾಂಧಿಯನ್ನು ಓದುವ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ಗಾಂಧಿ ಅನುಸರಿಸಿದ, ಬದುಕಿ ತೋರಿಸಿದ ಮಾರ್ಗಗಳಾವುವೂ ಕಠಿಣವಲ್ಲದೇ ಹೋದರೂ ಅವು ಪಾಲಿಸಲಾಗದ ಸೂತ್ರಗಳು ಎಂಬ ಭಾವನೆ ಬೆಳೆದಿದೆ. ಇನ್ನೊಂದು ಮುಖ್ಯ ಕಾರಣ, ಗಾಂಧಿ ಆಧುನಿಕ ಚಿಂತಕ; ಆಧುನಿಕತೆ, ನಾಗರಿಕತೆಗಳ ಬಗೆಗೆ ಗಾಂಧಿ ಹೊಂದಿದ್ದ ಅಭಿಪ್ರಾಯಗಳು ಆಧುನಿಕತೆಯನ್ನು ಮೈಗೂಡಿಸಿಕೊಂಡು ಬದುಕುತ್ತಿರುವ ಸಮಾಜಜೀವಿಗಳಿಗೆ ಅನಾಕರ್ಷವೂ ವ್ಯರ್ಥವೂ ಆಗಿ ತೋರುವಂತದ್ದು. ಇಂತಹ ಪರಿಸ್ಥಿತಿಯಲ್ಲಿ ಗಾಂಧಿಯನ್ನು ಕವಿದ ಅಸತ್ಯದ ಭಾವನೆಗಳನ್ನೂ ಪೂರ್ವಗ್ರಹಗಳನ್ನೂ ಸರಿಸಬೇಕೆನ್ನುವ ಆಶಯದಿಂದ ಬಂದ ಪುಸ್ತಕ – 'ಗಾಂಧಿ ಕಥನ'. ಕನ್ನಡದಲ್ಲಿ ಈವರೆಗೆ ಬಂದ ಗಾಂಧಿ ಕಥನಗಳು ಕೆಲವು ಗಾಂಧಿ ಭಜನೆಗಳಂತೆ ಇದ್ದರೆ, ಇನ್ನುಳಿದವು ಬೈದು ಗಾಂಧಿ ಆದರ್ಶಗಳನ್ನು ನಿರಚನೆ ಮಾಡುವಂತೆ ಇವೆ. ಈ ಮಾದರಿಗಳಿಗೆ ಹೊರತಾಗಿ ಸರಳವಾಗಿ ಗಾಂಧಿಯನ್ನು ಓದಲು ಸಾಧ್ಯವೆ? ಎಂಬ ಪ್ರಶ್ನೆಯನ್ನಿಟ್ಟುಕೊಂಡು ಪ್ರಸ್ತುತ ಪುಸ್ತಕ ರಚಿತವಾಗಿದೆ. ಇಲ್ಲಿ ಗಾಂಧಿಯವರ ಬದುಕನ್ನು ಸಾಧ್ಯಂತವಾಗಿ ನಿರೂಪಿಸಲಾಗಿದೆ. ಜೈನ, ಕ್ರಿಶ್ಚಿಯನ್, ಹಿಂದೂ ತತ್ತ್ವಶಾಸ್ತ್ರಗಳಲ್ಲದೆ ಟಾಲ್‌ಸ್ಟಾಯ್, ರಸ್ಕಿನ್, ಸಾಲ್ಟ್ ಮುಂತಾದ ಚಿಂತಕರ ಚಿಂತನೆಗಳ ಸಾರವನ್ನು ಹದಗೊಳಿಸಿ ತಮ್ಮ ತತ್ತ್ವಪಾಕವನ್ನು ಸಿದ್ಧಗೊಳಿಸಿಕೊಂಡ ಗಾಂಧಿಯವರ ಸಣ್ಣ ಸಣ್ಣ ಹೊರಳುಗಳನ್ನು ತೋರುವಂತಹ ಅನೇಕ ಸಂಗತಿಗಳನ್ನು ಈ ಪುಸ್ತಕ ಒಳಗೊಂಡಿದೆ.




ಗಾಂಧಿ ಕಥನ
ಲೇ: ಡಿ.ಎಸ್. ನಾಗಭೂಷಣ
ಪ್ರ: ಮುನಿಸ್ವಾಮಿ & ಸನ್ಸ್,
ಸರ್ವೋದಯ, ಬೆಂಗಳೂರು

ಇಲ್ಲಿ ವಿಶೇಷವಾಗಿ ಆಸಕ್ತಿ ಹುಟ್ಟಿಸುವಂಥದ್ದು ತಮ್ಮ ಪತ್ನಿ ಕಸ್ತೂರಬಾ ಜೊತೆಗೆ ಗಾಂಧೀಜಿ ನಡೆಸಿದ ಪ್ರಯೋಗಗಳು ಹಾಗೂ ಸ್ವತಃ ಅವರಿಗೆ ಹೆಣ್ಣಿನ ಸಾಹಚರ್ಯ ಅನಿವಾರ್ಯವೆನ್ನಿಸುವಂತೆ ಕಂಡುಕೊಂಡ ಸರಳಾದೇವಿಯವರ ಸಾಂಗತ್ಯ ಹಾಗೂ ಆಬಾ ಮತ್ತು ಮನು ಅವರ ಜೊತೆಗೆ ಹೆಜ್ಜೆ ಹಾಕಿದ್ದು ವೈರುಧ್ಯದಂತೆ ಕಾಣುತ್ತದೆ ಆದರೂ ಈ ಸಂಗತಿಗಳು ಗಾಂಧಿ ಮುಕ್ತವಾಗಿದ್ದರು ಎನ್ನುವುದನ್ನು ತೋರುವ ಸಂಗತಿಗಳು. ಗಾಂಧಿಯವರ ಇಂತಹ ಪುಟ್ಟ ಪುಟ್ಟ ವಿವರಗಳಿಂದಾಗಿ ಈ ಪುಸ್ತಕ ವಿಶಿಷ್ಟವಾಗಿದೆ.

● ಆರ್. ತಾರಿಣಿ ಶುಭದಾಯಿನಿ